**ಸಾಕ್ಷಿಯನ್ನು ದಿನಾಂಕಃ 21-06-2023 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಶ್ರಿ.ಕೆ.ವ್ಹಿ.ಕೆ ಪ್ರತಿವಾದಿ ಪರ ವಕೀಲರಿಂದ :**

ಪ್ರತಿವಾದಿ ನಂ. ೬ ಇವರು ವಂಶಾವಳಿಯಲ್ಲಿ ತೋರಿಸಿದಂತೆ ಮೂಲ ಪುರುಷ ಗಂಗಪ್ಪ ಇವರ ಮಗಳಾಗಬೇಕು ಎಂದರೆ ಸರಿ. ಗಂಗಪ್ಪ ಇವರು ತನ್ನ ಜೀವಿತಾವಧಿಯ ಕೊನೆಯ ದಿನಗಳಲ್ಲಿ ಪ್ರತಿವಾದಿ ನಂ. ೬ ರ ಜೊತೆ ಇದ್ದರು ಎಂದರೆ ಸರಿ. ಎರಡೂ ದಾವಾ ಮನೆಗಳಲ್ಲಿ ಪ್ರತಿವಾದಿ ನಂ. ೬ ಮತ್ತು ಗಂಗಪ್ಪ ಕೂಡಿ ಇರುತ್ತಿದ್ದರು ಎಂದರೆ ಸರಿ.

ಗಂಗಪ್ಪ ಇವರ ಹೆಂಡತಿ ಮಕ್ಕಳಿಗೆ ಅವರ ವ್ಯವಸ್ಥೆಯನ್ನು ಪ್ರತಿವಾದಿ ನಂ. ೬ ರಷ್ಟೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ನಂ. ೬ ರಿಗೆ ಮದುವೆ ಆಗಿತ್ತು. ನನಗೆ ಹಿರಿಯರ ಆಸ್ತಿ, ಒಟ್ಟು ಕುಟುಂಬದ ಆಸ್ತಿ ಮತ್ತು ಸ್ವಯಾರ್ಜಿತ ಆಸ್ತಿಗಳೆಂದರೇನು ಎಂಬ ಬಗ್ಗೆ ಮಾಹಿತಿ ಇದೆ.

ನಾನು ವಾದ ಪತ್ರದಲ್ಲಿ ದಾವಾ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಯರು ಕೂಡಿ ಸಂಪಾದಿಸಿ ಆಸ್ತಿ ಎಂದು ನಮೂದಿಸಿದ್ದೇವೆ ಎಂದರೆ ಸರಿ.

ನನ್ನ ಕುಟುಂಬ / ವಾದಿಯರು ದಾವಾ ಆಸ್ತಿ ಖರೀದಿಗೆ ಎಷ್ಟೇಷ್ಟು ಹಣ ಖರ್ಚು ಮಾಡಿದ್ದರೆಂದು ನಾನು ಎಲ್ಲಿಯೂ ಬರೆದಿಟ್ಟಿಲ್ಲ. ದಾವಾ ಆಸ್ತಿಗಳಲ್ಲಿ ಪ್ರಸ್ತುತ ಪ್ರತಿವಾದಿ ನಂ.೩, ೨, ೬ ಮತ್ತು ೫ ರವರು ಕಬ್ಜಾ ವಹಿವಾಟಿಯಲ್ಲಿದ್ದರು. ಈ ಬಗ್ಗೆ ನಾನು ದಂಡಾಧಿಕಾರಿಯವರಿಂದ ಯಾವುದೇ ಕಂದಾಯ ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಯರು ಕೂಡಿ ಖರೀದಿಸಿದ್ದರಿಂದ ನಾನು ದಾವಾ ಆಸ್ತಿಯಲ್ಲಿ ಪಾಲುವಾಟ್ನಿ ಕೇಳಿ ದಾವೆ ಹೂಡಿದ್ದೇನೆ ಎಂದರೆ ಸರಿ. ಸನ್ 2023 ರ ದಾವಾ ಆಸ್ತಿ ದಾಖಲೆಗಳ ಪ್ರಕಾರ ದಾವಾ ಜಮೀನು ಮತ್ತು ಆಸ್ತಿಗಳಲ್ಲಿ ಪ್ರತಿವಾದಿ ನಂ. ೬ ಹೆಸರು ನಮೂದು ಇದೆ ಎಂದರೆ ಸರಿ. ದಾವಾ ಆಸ್ತಿ ಉತಾರಿಯಲ್ಲಿ 13 ವರ್ಷಗಳಿಂದ ಪ್ರತಿವಾದಿ ನಂ. ೬ ಇವರೊಬ್ಬರ ಹೆಸರು ಇದೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಾಗಲಿ ಅಥವಾ ತಹಶೀಲ್ದಾರ ಕಚೇರಿಯಲ್ಲಾಗಲಿ ದಾವಾ ಆಸ್ತಿಯ ಉತಾರೆಯಲ್ಲಿ ಪ್ರತಿವಾದಿ ನಂ. ೬ ರ ಹೆಸರು ಮಾತ್ರ ಇದೆ ನಮ್ಮದು ಹೆಸರು ಸೇರಿಸಿ ಎಂದು ಕೇಳಿಕೊಂಡು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಎ.ಸಿ ಯವರ ಮುಂದೆ ಅರ್ಜಿ ಸಲ್ಲಿಸಿದ್ದಾಗಿ ನುಡಿಯುತ್ತಾರೆ. ಎ.ಸಿ ಯವರ ಮುಂದೆ ಸಲ್ಲಿಸಿದ ಅರ್ಜಿಯು ವಜಾಗೊಂಡು ಪ್ರತಿವಾದಿ ನಂ. ೬ ರವರ ಪರ ತೀರ್ಪು ಆಗಿರುತ್ತದೆ. ಸದರಿ ಎಸಿ ಯವರ ಆದೇಶವನ್ನು ಪ್ರಶ್ನಿಸಿ ಡಿಸಿ ಬಾಗಲಕೋಟೆ ಇವರ ಮುಂದೆ ಮೇಲ್ಮನವಿ ಸಲ್ಲಿಸಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಎಸಿ ಮತ್ತು ಡಿಸಿಯವರ ಮುಂದೆ ಎರಡೇ ಪ್ರಕರಣ ಹೂಡಿದ್ದು, ಅದರ ಹೊರತಾಗಿ ಬೇರೆ ಎಲ್ಲಿಯೂ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಎಸಿ ಮತ್ತು ಡಿಸಿ ಯವರ ಮುಂದೆ ಸಲ್ಲಿಸಿದ ಆರ್.ಟಿ.ಎಸ್. ಅಪೀಲ ನಂ. 2/2015-16 ಮತ್ತು ರಿವಿಜನ್ ನಂ. 8/2016-17 ಇವುಗಳ ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದೇನೆ.

ದಿ: 06-05-2010 ರಂದು ಪ್ರತಿವಾದಿ ನಂ. 6 ರ ತಂದೆ ಗಂಗಪ್ಪ ಅವರು ತನ್ನ ಸ್ವಂತ ಮಗಳಾದ ಪ್ರತಿವಾದಿ ನಂ. 6 ಇವರಿಗೆ ನೋಂದಾಯಿತ ಭಕ್ಷಿಸ ಪತ್ರದ ಮೂಲಕ ದಾವಾ ಆಸ್ತಿಗಳನ್ನು ನೀಡಿರುವ ವಿಷಯ ನನಗೆ ಗೊತ್ತು. ಮುಂದುವರೆದು ಸಾಕ್ಷಿ ಸದರಿ ವಿಷಯ ಗೊತ್ತಾದ ಮೇಲೆ ಪ್ರಸ್ತುತ ದಾವೆ ಸಲ್ಲಿಸಿದ್ದಾಗಿ ನುಡಿಯುತ್ತಾರೆ. ದಿ: 06-05-2010 ರ ಭಕ್ಷಿಸ ಪತ್ರದ ಪ್ರಕಾರ ದಾವಾ ಆಸ್ತಿಗಳಿಗೆ ಪ್ರತಿವಾದಿ ನಂ. ೬ ಸಂಪೂರ್ಣ ಮಾಲೀಕಳಾಗಿದ್ದು, ಅವರೇ ಕಬ್ಜಾ ವಹಿವಾಟಿಯಲ್ಲಿದ್ದಾರೆಂದರೆ ಸಾಕ್ಷಿಯು

ಖೊಟ್ಟಿ ದಾಖಲೆ ಸೃಷ್ಟಿಸಿ, ಖೊಟ್ಟಿ ಭಕ್ಷಿಸ ಪತ್ರ ಮಾಡಿಕೊಂಡಿದ್ದಾಗಿ ನುಡಿಯುತ್ತಾರೆ. ಈ ಬಗ್ಗೆ ಠಾಣೆಯಲ್ಲಾಗಲಿ, ನ್ಯಾಯಾಲಯದ ಮುಂದೆ ಆಗಲಿ ಯಾವುದೇ ಪಿರ್ಯಾದಿ ದಾಖಲಿಸಿಲ್ಲ. ದಾವಾ ಆಸ್ತಿ ಗಂಗಪ್ಪ ಇವರ ಸ್ವಯಾರ್ಜಿತ ಆಸ್ತಿ ಇದ್ದರು ಸಹಿತ ವಾದಿ ನಂ. 4 ಇವರ ಮಾತು ಕೇಳಿ ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಇವತ್ತಿನ ತಾರೀಕು ಮತ್ತು ವಸ್ತು ಸ್ಥಿತಿಯ ಪ್ರಕಾರ ದಾವೆಯಲ್ಲಿ ಹಾಜರುಪಡಿಸಿದ್ದ ದಾಖಲೆಗಳು ಸರಿ ಇವೆ ಎಂದರೆ ಸರಿ.

ವಾದಿ ಪರ ವಕೀಲರು ಮುಂದುವರೆದ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.